**ದಿನಾಂಕ: 19.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 3 ನೇ ಎದುರುದಾರರ ಪರ ವಕೀಲರಿಂದ:**

ನಾನು ಸರ್ಕಾರಿ ನೌಕರ. ನಾನು ಶಾಲಾ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಿಮಗೆ ತಿಂಗಳ ವೇತನ ಎಸ್.ಬಿ.ಐ ಬ್ಯಾಂಕ್ ಮುಖಾಂತರ ಪಾವತಿಯಾಗುತ್ತದೆ ಎಂದರೆ ಸರಿ. ಅಪಘಾತವಾದ ಹಿಂದಿನ 3 ತಿಂಗಳಿನಿಂದ ಈ ದಿನಾಂಕದವರೆಗೆ ಬ್ಯಾಂಕ್ ಸ್ಟೇಟ್‌ಮೆಂಟನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. 2022 ರಿಂದ ಪ್ರತಿ ವರ್ಷ ನಿಮ್ಮ ಸಂಬಳ ಹೆಚ್ಚುವರಿಯಾಗುತ್ತಾ ಹೋಗುತ್ತದೆ ಎಂದರೆ ಸರಿ. ಅಪಘಾತವಾದ ನಂತರ ನಾನು 3 ತಿಂಗಳು ಗೈರು ಹಾಜರಾಗಿರುತ್ತೇನೆ, ಆ ವೇಳೆಯಲ್ಲಿ ನನಗೆ ವೇತನ ಬಂದಿರುವುದಿಲ್ಲ ಎಂದು ತಿಳಿಸಿರುತ್ತೀರಿ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಲು ಸಾಧ್ಯವಾಗುವುದಿಲ್ಲ, ಆ 3 ತಿಂಗಳ ಅವಧಿಯ ವೇತನವನ್ನು ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವಾದ ನಂತರ ನಿಮ್ಮ ವೇತನದಲ್ಲಿ ಹೆಚ್ಚುವರಿಯಾಗಿರುತ್ತದೆ ಎಂದರೆ ಸರಿ. ವಿಮಾ ಪಾಲಿಸಿಯಿಂದ ನಾನು ಯವುದೇ ಹಣ ಪಡೆದುಕೊಂಡಿರುವುದಿಲ್ಲ. ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ನಮ್ಮ ಇಲಾಖೆಯ ಮುಖಾಂತರ ಮೆಡಿಕಲ್ ಬಿಲ್ಲುಗಳ ಮರುಪಾವತಿಗಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ನಿಮ್ಮ ಕೈಬೆರಳಿಗೆ ಮಾತ್ರ ಗಾಯಗಳುಂಟಾಗಿದ್ದವು ಎಂದರೆ ಸರಿ. ಅಪಘಾತದ ಬಗ್ಗೆ ಪೊಲೀಸರಿಗೆ ನಾನೇ ಹೇಳಿಕೆ ನೀಡಿ, ಅದಕ್ಕೆ ಸಹಿ ಮಾಡಿರುತ್ತೇನೆ. ಅಪಘಾತವಾದ 3-4 ತಿಂಗಳು ಆದ ನಂತರ ಸದರಿ ಪ್ರಕರಣವನ್ನು ದಾಖಲಿಸುವ ವೇಳೆಯಲ್ಲಿಯೂ ಸಹ ದಾಖಲೆಗಳಿಗೆ ನಾನೇ ಸಹಿ ಮಾಡಿರುತ್ತೇನೆ.

**2.** ಮೊದಲ ಬಾರಿ ಶಸ್ತ್ರ ಚಿಕಿತ್ಸೆ ಆದ ವೇಳೆಯಲ್ಲಿ ಕೈಗೆ ರಾಡ್ ಹಾಕಿದ್ದರು. ರಾಡ್ ಅಳವಡಿಸಿದ 2 ತಿಂಗಳ ನಂತರ ಪುನಃ ನಾನು ಆಸ್ಪತ್ರೆಗೆ ಹೋಗಿದ್ದೆನು. 2 ನೇ ಬಾರಿ ಆಸ್ಪತ್ರೆಗೆ ಹೋದಾಗ ನಿವೇ ಸ್ವತಃ ಬಿದ್ದು ಗಾಯ ಮಾಡಿಕೊಂಡು ಆಸ್ಪತ್ರೆಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ದಿ.29.05.2023 ರಂದು ರಾಡನ್ನು ತೆಗೆದು ಸ್ಕ್ರೂ ಅಳವಡಿಸಿರುತ್ತಾರೆ ಎಂದರೆ ಸಾಕ್ಷಿಯು ರಾಡುಗಳನ್ನು ಸಹ ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಎರಡನೇ ಬಾರಿ ಆಸ್ಪತ್ರೆಗೆ ಹೋದಾಗ ನಿಮ್ಮ ಕೈ ಬೆರಳುಗಳು ಚಟುವಟಿಕೆಯಿಂದ ಇದ್ದವು ಎಂದು ನಿ.ಪಿ.8 ರಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಕೈ ಬೆರಳುಗಳು ಚಟುವಟಿಕೆಯಿಂದ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸ್ವತಃ ಕೆಳಗೆ ಬಿದ್ದು ಕೈಗೆ ಅಳವಡಿಸಿದ ರಾಡು ಹೊಡೆದು ಹೋದ ಕಾರಣ ಎರಡನೇ ಬಾರಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ ಆರ್.ಟಿ.ಎ ಎಂದು ನಮೂದಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಬಾರಿ ಆಸ್ಪತ್ರೆಗೆ ಹೋದಾಗ 3 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ದಿ.02.06.2023 ರಂದು ಶಸ್ತ್ರ ಚಿಕಿತ್ಸೆ ಮಾಡಿ ಹೊಡೆದ ಹೋದ ರಾಡನ್ನು ತೆಗೆದು ಹಾಕಿ ಸ್ಕ್ರೂ ಹಾಕಿರುತ್ತಾರೆ ಎಂದರೆ ಸಾಕ್ಷಿಯು ರಾಡ್ ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ.

**3.** ಅಪಘಾತದ ದಿನ ನಾನು ನನ್ನ ಮೋಟಾರು ಸೈಕಲ್ಲನ್ನು ಚಲಾಯಿಸುತ್ತಿದ್ದೆ. ಅಪಘಾತದ ಸ್ತಳವು 15 ರಿಂದ 20 ಅಡಿ ಅಗಲವಾಗಿರುತ್ತದೆ. ನಾನು ಹೆಲ್ಮೆಟ್ ಧರಿಸಿಕೊಂಡಿದ್ದೆನು. ಅಪಘಾತದಿಂದಾಗಿ ನನ್ನ ದ್ವಿಚಕ್ರ ವಾಹನಕ್ಕೆ ಯಾವುದೇ ಜಖಂ ಆಗಿರುವುದಿಲ್ಲ. ಪ್ಯಾಸೆಂಜರ್ ಆಟೋ ನನಗೆ ಡಿಕ್ಕಿಪಡಿಸಿತು. ನಿ.ಪಿ.5 ರ ಪ್ರಕಾರ ನಿಮ್ಮ ದ್ವಿ ಚಕ್ರ ವಾಹನಕ್ಕೆ ಡ್ಯಾಮೇಜ್ ಆಗಿರುವುದಕ್ಕೆ ನಮೂದಾಗಿರುತ್ತದೆ ಎಂದರೆ ಸರಿ. ಆಟೋದ ಹಿಂಭಾಗದ ಡೋರ್ ಜಖಂಗೊಂಡಿದೆ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಅತಿವೇಗವಾಗಿ

ನಿಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿ ಆಟೋದ ಹಿಂಬದಿಗೆ ಡಿಕ್ಕಿಪಡಿಸಿರುತ್ತೀರಿ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆಟೋದಲ್ಲಿ ಪ್ರಯಾಣಿಕರು ಇದ್ದರು. ಆಟೋದಲ್ಲಿ ಪ್ರಯಾಣಿಕರಿದ್ದ ಕಾರಣ ಆಟೋವನ್ನು ಚಾಲಕ ನಿಧಾನವನ್ನು ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಆಟೋ ಚಾಲಕನ ವಿರುದ್ದ ಸುಳ್ಳು ಪ್ರಕರಣ ದಾಖಲಿಸದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಉಂಟಾದ ಗಾಯಗಳು ಸಂಪೂರ್ಣವಾಗಿ ಗುಣಮುಖ ಹೊಂದಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.